ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2119/2018

ಚಾಸಾಃ4 ಪ್ರಾಸಾಃ4

ದಿನಾಂಕಃ 19.07.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಿತೇಶ್ ಶೆಟ್ಟಿ |
| ತಂದೆಯ ಹೆಸರು | : | ಭೋಜರಾಜ ಶೆಟ್ಟಿ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಬೇಕರಿಯಲ್ಲಿ ಕೆಲಸ |
| ವಾಸ ಸ್ಥಳ | : | ಹೆಸ್ನಾ ಬೈಲು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ಆರೋಪಿಯು ಬಸ್ಸಿನ ಚಾಲಕನಾಗಿದ ಕಾರಣ ಪರಿಚಯವಿರುತ್ತದೆ. ಮೃತ ದೀಕ್ಷಿತ್ ಶೆಟ್ಟಿರವರ ಪರಿಚಯವಿಲ್ಲ. ದಿಃ 15-07-2018 ರಂದು ನಾನು ಕೆಎ-20-ಬಿ-3040 ಬಸ್ಸಿನ ನಿರ್ವಹಕನಾಗಿ ಕೆಲಸ ಮಾಡುತ್ತಾ ಕುಂದಾಪುರದಿಂದ ಎಡಮೊಗೆಗೆ ಹೋಗುವ ದಾರಿಯಲ್ಲಿ ನೆಲ್ಲಿಕಟ್ಟೆ ಹತ್ತಿರ ಬಸ್ಸು ನಿಲ್ಲಿಸಿದಾಗ ಎದುರುಗಡೆಯಿಂದ ಬಂದ ಕಾರು ಬಸ್ಸಿ ಗೆ ಡಿಕ್ಕಿ ಹೊಡೆದ ಪರಿಣಾಮ ಸದ್ರಿ ಕಾರಿನ ಚಾಲಕ ಹಾಗೂ ಸಹ ಸವಾರರಿಗೆ ಗಾಯಗಳಾಗಿರುತ್ತವೆ.

ಮರುದಿನ ಪೊಲೀಸರು ನಿರ್ದೇಶಿಸಿದಂತೆ ನಾನು ತೋರಿಸಿದ ಸ್ಥಳಕ್ಕೆ ಪೊಲೀಸರು ಬಂದು ಮಹಜರು ಕ್ರಮ ಜರುಗಿಸಿರುತ್ತಾರೆ. ಸದ್ರಿ ಮಹಜರಿನಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಸಾಕ್ಷಿಯು ಮಹಜರು ಮತ್ತು ನಕ್ಷೆಯಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಗಳನ್ನು ನಿಪಿ-7 ಮತ್ತು 8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-7(ಎ) ಮತ್ತು ನಿಪಿ-8(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 15-07-2018 ರಂದು ನಾನು ಕೆಲಸ ಮಾಡುತ್ತಿದ್ದ ಬಸ್ಸು ಚಾಲಕ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಎದುರಿನಿಂದ ಬಂದ ಕೆಎ-20-ಎನ್-2213 ಸ್ಯಾಂಟ್ರೋ ಕಾರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅದರ ಚಾಲಕನಾದ ದೀಕ್ಷಿತ್ ಹಾಗೂ ಸಹಸವಾರನಾದ ಕಿರಣ್ ರವರು ತೀವ್ರ ಸ್ವರೂಪದ ಗಾಯಗೊಂಡಿದ್ದು, ಅವರ ಪೈಕಿ ದೀಕ್ಷಿತ್ ಹಾಗೂ ಸಹಸವಾರನಾದ ಕಿರಣ್ ಇಬ್ಬರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು ನಾನು ಈ ಘಟನೆಯ ಪ್ರತ್ಯಕ್ಷದರ್ಶಿಯಾಗಿದ್ದು, ದಿಃ 16-07-2018 ರಂದು ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 10 ರಿಂದ 11 ರವರೆಗೆ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ ಫೋಟೋ ತೆಗೆದು 2 ವಾಹನಗಳನ್ನು ಅಮಾನತ್ತುಪಡಿಸಿಕೊಂಡು ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿತರ ಒಟ್ಟಾಗಿ ಕೆಲಸ ಮಾಡುತ್ತಿದ್ದ ಕಾರಣ ಆತನ ನಿರ್ಲಕ್ಷ್ಯತನದಿಂದ ಅಪಘಾತವಾಗಿದ್ದು ಅವರಿಗೆ ಸಹಾಯ ಮಾಡಲು ಈ ಮೇಲಿನ ಕ್ರಮಗಳನ್ನು ನನ್ನ ಸಮಕ್ಷಮ ನಡೆದಿದ್ದು ಪೊಲೀಸರಿಗೆ ಈ ವಿಚಾರವಾಗಿ ಹೇಳಿಕೆ ಮಾಡಿದ್ದರೂ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**